(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:04/2016-17 ದಿನಾಂಕ:08.09.2016.

**ಉಪಸ್ಥಿತರು: ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

********

**ವಾದಿಗಳು: ಶ್ರೀ/ ಶ್ರೀಮತಿ**

1. ಮಂಗಳಮ್ಮ ತಂದೆ ದಿ॥ ಗುರುನಾಥಪ್ಪ,
2. ಅಕ್ಕಸಾಲಿ ಗೋಪಿನಾಥ ತಂದೆ ದಿ॥ ಗುರುನಾಥಪ್ಪ,
3. ಅಕ್ಕಸಾಲಿ ಶಿವರಾಮಪ್ಪ ತಂದೆ ದಿ॥ ಗುರುನಾಥಪ್ಪ,
4. ಅಕ್ಕಸಾಲಿ ಸುರೇಶ್ ತಂದೆ ದಿ॥ ಗುರುನಾಥಪ್ಪ,
5. ಅಕ್ಕಸಾಲಿ ಬಸವರಾಜ ತಂದೆ ದಿ॥ ಗುರುನಾಥಪ್ಪ,

ಮೇಲಿನ ಎಲ್ಲರ ವಾಸ: ತಳಕಲ್ಲು ಗ್ರಾಮ, ಹೂವಿನಹಡಗಲಿ ತಾಲೂಕು, ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ತಹಶೀಲ್ದಾರರು, ಹಡಗಲಿ,
2. ಕಂದಾಯ ನಿರೀಕ್ಷಕರು, ಇಟ್ಟಿಗಿ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಇಟ್ಟಿಗಿ | ಮಹಾಜನದಹಳ್ಳಿ | 80/2 | 06 ಎಕರೆ 07 ಸೆಂಟ್ಸ್ |

**ಪೀಠಿಕೆ:-**

ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಮಹಾಜನದಹಳ್ಳಿ ಗ್ರಾಮದ ಸ.ನಂ.80/2 ಪೈಕಿ ವಿಸ್ತೀರ್ಣ:06 ಎಕರೆ 07 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ನೋಂದಯಿತ ಪಾಲು ವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆಗೆ ಕೋರಿ ಕಂದಾಯ ನಿರೀಕ್ಷಕರು, ಇಟ್ಟಿಗಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.26/2015-16 ದಿನಾಂಕ:18.01.2016 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ವಾದಿಗಳು ದಿನಾಂಕ:15.04.2016 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:02.06.2016 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ, ಸದರಿ ವ್ಯಾಜ್ಯದ ಜಮೀನು ಮೂಲತ: ವಾದಿ-1 ರವರಾದ ಮಂಗಳಮ್ಮ ತಂದೆ ದಿ॥ ಗುರುನಾಥಪ್ಪ ಇವರಿಗೆ ಸಂಬಂಧಿಸಿದ್ದು, ವಾದಿಗಳೆಲ್ಲರು ಒಂದೇ ಕುಟುಂಬದವರಾಗಿದ್ದು, ವಾದಿ-1 ರಿಂದ 5 ರವರು ಏಕಸ್ತರಾಗಿ ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಸಂಖ್ಯೆ:3121/2015-16 ದಿನಾಂಕ:27.11.2015 ರ ಪ್ರಕಾರ ಪಾಲು ವಿಭಾಗ ಮಾಡಿಕೊಂಡಿದ್ದು, ಸದರಿ ವ್ಯಾಜ್ಯದ ಜಮೀನುಗಳು ಪಾಲು ವಿಭಾಗದ ಪ್ರಕಾರ ವಾದಿ-1 ರಿಂದ 5 ರವರ ಪಾಲಿಗೆ ಬಂದಿರುವುದು ಕಂಡು ಬಂದಿರುತ್ತದೆ.

ಸದರಿ ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ಕಂದಾಯ ನಿರೀಕ್ಷಕರು ,ಇಟ್ಟಿಗಿ. ಇವರು ತಪ್ಪಾಗಿ ಹಕ್ಕು ಬದಲಾವಣೆ ಮಾಡಿರುವುದು ಕಂಡು ಬಂದಿದ್ದು, ಆದರೆ ವಾದಿ-1 ರಿಂದ 5 ವರೆಗೆ ಸದರಿ ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಪ್ರಕಾರ ಈ ಕೆಳಗಿನಂತೆ ಪಾಲು ವಿಭಾಗ ಆಗಿರುವುದು ಕಂಡು ಬಂದಿರುತ್ತದೆ

| ಕ್ರ.ಸಂ. | ಷೆಡ್ಯೂಲಾಸ್ತಿ | ಹೆಸರು | ತಾಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|---|---|
| 1 | ಎ ಷೆಡ್ಯೂಲ್ | 1] ಮಂಗಳಮ್ಮ ತಂದೆ ದಿ॥ ಗುರುನಾಥಪ್ಪ, 2] ಅಕ್ಕಸಾಲಿ ಗೋಪಿನಾಥ ತಂದೆ ದಿ॥ ಗುರುನಾಥಪ್ಪ, 3] ಅಕ್ಕಸಾಲಿ ಶಿವರಾಮಪ್ಪ ತಂದೆ ದಿ॥ ಗುರುನಾಥಪ್ಪ, ಇವರುಗಳ ಹೆಸರಿನಲ್ಲಿ ಜಂಟಿಯಾಗಿ | ಹಡಗಲಿ | ಮಹಾಜನದಹಳ್ಳಿ | 80/2 | 03 ಎಕರೆ 07 ಸೆಂಟ್ಸ್ ಜಂಟಿಯಾಗಿ |

| | | | | | | |
|---|---|---|---|---|---|---|
| 2 | ಬಿ ಷೆಡ್ಯೂಲ್ | ಅಕ್ಕಸಾಲಿ ಶಿವರಾಮಪ್ಪ ತಂದೆ ದಿ॥ ಗುರುನಾಥಪ್ಪ, | ಹಡಗಲಿ | ಮಹಾಜನದಹಳ್ಳಿ | 80/2 | 01 ಎಕರೆ 00 ಸೆಂಟ್ಸ್ |
| 3 | ಸಿ ಷೆಡ್ಯೂಲ್ | ಅಕ್ಕಸಾಲಿ ಸುರೇಶ್ ತಂದೆ ದಿ॥ ಗುರುನಾಥಪ್ಪ, | ಹಡಗಲಿ | ಮಹಾಜನದಹಳ್ಳಿ | 80/2 | 01 ಎಕರೆ 00 ಸೆಂಟ್ಸ್ |
| 4 | ಡಿ ಷೆಡ್ಯೂಲ್ | ಅಕ್ಕಸಾಲಿ ಬಸವರಾಜ ತಂದೆ ದಿ॥ ಗುರುನಾಥಪ್ಪ, | ಹಡಗಲಿ | ಮಹಾಜನದಹಳ್ಳಿ | 80/2 | 01 ಎಕರೆ 00 ಸೆಂಟ್ಸ್ |

ಈ ಮೇಲಿನಂತೆ ಪಾಲು ವಿಭಾಗವಾಗಿದ್ದು, ಸದರಿ ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ಹಾಖಲೆಗಳ ಆಧಾರದ ಮೇಲೆ, ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಮಹಾಜನದಹಳ್ಳಿ ಗ್ರಾಮದ ಸ.ನಂ.80/2 ಪೈಕಿ ವಿಸ್ತೀರ್ಣ:06 ಎಕರೆ 07 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಇಟ್ಟಿಗಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.26/2015-16 ದಿನಾಂಕ:18.01.2016 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಸಂಖ್ಯೆ:3121/2015-16 ದಿನಾಂಕ:27.11.2015 ರ ಪ್ರಕಾರ **ಶ್ರೀಮತಿ ಅಕ್ಕಸಾಲಿ ಮಂಗಳಮ್ಮ ತಂದೆ ದಿ॥ ಗುರುನಾಥಪ್ಪ, ಶ್ರೀ ಗೋಪಿನಾಥ ತಂದೆ ದಿ॥ ಗುರುನಾಥಪ್ಪ, ಶ್ರೀ ಅಕ್ಕಸಾಲಿ ಶಿವರಾಮಪ್ಪ ತಂದೆ ದಿ॥ ಗುರುನಾಥಪ್ಪ** ಇವರ ಹೆಸರಿಗೆ ಜಂಟಿಯಾಗಿ ಸ.ನಂ.80/2 ಪೈಕಿ ವಿಸ್ತೀರ್ಣ:03 ಎಕರೆ 07 ಸೆಂಟ್ಸ್; ಜಮೀನನ್ನು, **ಶ್ರೀ ಅಕ್ಕಸಾಲಿ ಶಿವರಾಮಪ್ಪ ತಂದೆ ದಿ॥ ಗುರುನಾಥಪ್ಪ,** ಇವರ ಹೆಸರಿಗೆ ಸ.ನಂ.80/2 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಜಮೀನನ್ನು, **ಶ್ರೀ ಅಕ್ಕಸಾಲಿ ಸುರೇಶ ತಂದೆ ದಿ॥ ಗುರುನಾಥಪ್ಪ,** ಇವರ ಹೆಸರಿಗೆ ಸ.ನಂ.80/2 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಜಮೀನನ್ನು, **ಶ್ರೀ ಅಕ್ಕಸಾಲಿ ಬಸವರಾಜ ತಂದೆ ದಿ॥ ಗುರುನಾಥಪ್ಪ,** ಇವರ ಹೆಸರಿಗೆ ಸ.ನಂ.80/2 ಪೈಕಿ ವಿಸ್ತೀರ್ಣ:01 ಎಕರೆ 00 ಸೆಂಟ್ಸ್; ಜಮೀನನ್ನು, ಪಾಲು ವಿಭಾಗ ಮಾಡಿಕೊಂಡಿದ್ದು, ಸದರಿ ನೋಂದಾಯಿತ ಪಾಲು ವಿಭಾಗ ಪತ್ರದ ಪ್ರಕಾರ ವಾದಿ-1 ರಿಂದ 5 ರವರ ಹೆಸರುಗಳಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹಡಗಲಿ ತಾಲೂಕು ಇಟ್ಟಿಗಿ ಹೋಬಳಿ ಮಹಾಜನದಹಳ್ಳಿ ಗ್ರಾಮದ ಸ.ನಂ.80/2 ಪೈಕಿ ವಿಸ್ತೀರ್ಣ:06 ಎಕರೆ 07 ಸೆಂಟ್ಸ್; ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಇಟ್ಟಿಗಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.26/2015-16 ದಿನಾಂಕ:18.01.2016 ವನ್ನು ರದ್ದುಪಡಿಸುತ್ತಾ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಸಂಖ್ಯೆ:3121/2015-16 ದಿನಾಂಕ:27.11.2015 ರ ಪ್ರಕಾರ ವಾದಿ-1 ರಿಂದ 5 ರವರ ಹೆಸರುಗಳಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹಡಗಲಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:08.09.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ ಡಾ. ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]**
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು**:- ತಹಶೀಲ್ದಾರರು, ಹಡಗಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.